**ಸಿ.ಸಿ. ನಂಬರ್ : 266/2019**
**ಪಿ.ಡಬ್ಲ್ಯೂ : 1**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು

ದಿನಾಂಕ : 08.07.2026

**ಪಾಟೀ ಸವಾಲು: ಶ್ರೀ ಎಸ್.ಜೆ.ಹೆಚ್ ವಕೀಲರಿಂದ–ಆರೋಪಿಯ ಪರವಾಗಿ :**

ನಾನು ಪಿ.ಯು.ಸಿ ವಿದ್ಯಾಭ್ಯಾಸ ಮಾಡಿರುತ್ತೇನೆ. ನಿಪಿ-6 ರಲ್ಲಿ ತೋರಿಸಿರುವ ದಾಖಲಾತಿಗಳಲ್ಲಿ ಒಂದು ಕಡೆ ಸರ್ವೆ ನಂಬರ್ 40 ರಲ್ಲಿ ಶಿ ಬಸಪ್ಪ ಎಂದು ಇದ್ದು ಸರ್ವೆ ನಂಬರ್ 41 ರಲ್ಲಿ ಎ.ಸಿ ಬಸಪ್ಪ ಎಂದು ಇದೆ ಅಂದರೆ ರೆವಿನ್ಯೂ ದಾಖಲಾತಿಗಳಲ್ಲಿ ಅದೇ ರೀತಿ ಬರುತ್ತಿದೆ ಎನ್ನುತ್ತಾರೆ. ಸದರಿ ಎರಡೂ ಆರ್.ಟಿ.ಸಿ ಗಳು ಒಟ್ಟು ಕುಟುಂಬಕ್ಕೆ ಸೇರಿದ್ದವು ಎಂದು ಹೇಳಿದ್ದು ಒಟ್ಟು ಕುಟುಂಬ ಅಂದರೆ ಯಾರು ಯಾರು ಎಂದರೆ ನನ್ನ ತಂದೆಯ ಆಸ್ತಿಯಲ್ಲಿ ನಾನು ಸ್ವಾಧೀನದಲ್ಲಿ ಇದ್ದೆನು ಎನ್ನುತ್ತಾರೆ. ಒಟ್ಟು ಕುಟುಂಬ ಅಂದರೆ ಯಾರು ಯಾರು ಬರುತ್ತೀರಾ ಅಂದರೆ ನನ್ನ ತಂದೆ, ನಾನು ಮತ್ತು ನನ್ನ ಸಹೋದರ ಉಮೇಶ್ ಎನ್ನುತ್ತಾರೆ.

**ಮರು ವಿಚಾರಣೆ : ಇಲ್ಲ**

**ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ**
**ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು.**

ಓ.ಹೇ.ಕೇ.ಸರಿ ಇದೆ

**ಸಹಿ/-**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸೋಮವಾರಪೇಟೆ.**